


ಇದೆಲ್ಲವೂ ಆಗಲು ಸಾಧ್ಯವಿದೆಯೇ? ಯಾರಾದರೂ ತಮ್ಮನ್ನು ಹಾಗೆಲ್ಲ ಗುರುತಿಸಿಕೊಳ್ಳುವಾಗ ಅಥವಾ ಬೇರೆಯವರನ್ನು ಹಾಗೆ ಗುರುತಿಸುವಾಗ ಅದನ್ನು ಹೇಗೆ ವ್ಯಾಖ್ಯಾನಿಸಿಕೊಳ್ಳುತ್ತೇವೆ? ಇತಿಹಾಸ, ರಾಜಕೀಯ, ಸಾಹಿತ್ಯ, ತತ್ವ, ಸಿದ್ಧಾಂತಗಳ ಹಿನ್ನೆಲೆಯಿಲ್ಲದ ಶಿಕ್ಷಿತ ಸಮುದಾಯ ಇದರ ಬಗ್ಗೆ ಹೇಗೆ ಯೋಚಿಸುತ್ತದೆ? ನನ್ನೊಳಗಿನ ಸಂಶೋಧಕ, ವಿಮರ್ಶಕ ಹಾಗೂ ಮೀಮಾಂಸಕಾರನಿಗೆ ಇದು ಗಹನವಾಗಿ ಕಂಡಿತು. ಒಂದು ರೀತಿಯಲ್ಲಿ ಅದು ನೂರು ವರ್ಷಗಳನ್ನೂ ಮೀರಿದ ದಲಿತ ಇತಿಹಾಸದ ಮೆಲುಕು. 'ದಲಿತರು' ಎಂಬ ವಿಶಾಲ ಭಿತ್ತಿಯಲ್ಲಿ ಇಂದು ನಾವು ನೋಡುವ ಸಮುದಾಯಗಳು ಎಷ್ಟು ಸಂಕೀರ್ಣವಾಗಿದೆಯಲ್ಲ?!

'ಧಮ್ಮಚಕ್ರ ಪ್ರವರ್ತನ ದಿನ'ದಂದು ಬೌದ್ಧರಾದಂತಹ ಕುಟುಂಬದಿಂದ ಬಂದವರು ಯುವರಾಜ್. ಅಕ್ಟೋಬರ್ 14, 1956 – ಅಂಬೇಡ್ಕರ್ ಸಾರ್ವಜನಿಕವಾಗಿ ಸುಮಾರು ಆರು ಲಕ್ಷ ಮಂದಿ ಅಸ್ಪೃಶ್ಯರೊಟ್ಟಿಗೆ, ಇನ್ನೂ ಖಚಿತವಾಗಿ ಹೇಳುವುದಾದರೆ ಮಹಾರ್‌ರೊಟ್ಟಿಗೆ, ಹಿಂದೂಮತವನ್ನು ತೊರೆದು ಬೌದ್ಧಮತವನ್ನು ಸ್ವೀಕರಿಸಿದ ದಿನವದು. ಹಿಂದೂಮತದ ಜಾತಿ ವ್ಯವಸ್ಥೆಯಿಂದ ವಿಮೋಚನೆ ಹೊಂದುವ ಏಕೈಕ ಮಾರ್ಗವಾಗಿ ಕಂಡಿದ್ದ ಆ ಬೌದ್ಧಮತವನ್ನು ಅಂಬೇಡ್ಕರ್ 'ನವಯಾನ' ಎಂದು ಕರೆದಿದ್ದರು. ಹಾಗೆಂದರೆ, 'ಹೊಸವಾಹನ' ಎಂದರ್ಥ. ಹಾಗೆ ಬೌದ್ಧರಾದವರು ತಮ್ಮನ್ನು ನವಬೌದ್ಧರೆಂದೂ ಕರೆದುಕೊಳ್ಳುವುದುಂಟು. ಶ್ರೀಮತಿ ಯುವರಾಜ್ ಕೂಡ ಅಂತಹ ಕುಟುಂಬದಿಂದ ಬಂದವರೇ. ಅವರಿಂದಾಗಿ ಅವರ ಮಕ್ಕಳು ಕೂಡ. ಯುವರಾಜ್ ದಂಪತಿಗಳಂತೆ ಹುಟ್ಟಿನಿಂದ ಬೌದ್ಧರಾದವರಿಗೆ ಮತದ ಆಯ್ಕೆಯ ಪ್ರಶ್ನೆಯೇ ಏಳುವುದಿಲ್ಲ. ಅಶೋಕನ ತಂದೆ ಹಾಗೂ ತಾತ ಬೇರೆ ಬೇರೆ ಮತಧರ್ಮಗಳನ್ನು ಅನುಸರಿಸುತ್ತಿದ್ದವರು. ಆದರೆ, ಅಶೋಕ ಮಾತ್ರ ಬೌದ್ಧಮತೀಯನಾದ. ಹಾಗೆಯೇ, ಹುಟ್ಟಿನಿಂದ ಮಹಾರರಾದ ಅಂಬೇಡ್ಕರ್ ಅವರದ್ದು ಕೂಡ. ಅವರಿಂದಾಗಿ ಅವರ ಸಂತತಿಯೆಲ್ಲ ಬೌದ್ಧರು. ನವ ಬೌದ್ಧರಿಗೆ ಅಂಬೇಡ್ಕರ್ ಬುದ್ಧನ ಸಮಾನ. ಬುದ್ಧನೊಂದಿಗಿಲ್ಲದ ಜಾತಿ, ಭಾಷೆ, ಮತಗಳ